



ಪತ್ನಿ: ಏನೂಂದ್ರೆ, ರಾತ್ರಿ ನಮ್ಮ ಅಡುಗೆ ಮನೆಗೆ ಕಳ್ಳ ಬಂದು ಪಾಯಸವನ್ನೆಲ್ಲಾ ಕುಡಿದು ಹೋಗಿದ್ದಾನೆ.

ಪತಿ: ಹೇಳು ಯಾರನ್ನು ಬಾ ಅಂತ ಕರೆಯಲಿ. ಪೊಲೀಸರನ್ನಾ, ಆಂಬುಲೆನ್ಸಾ?

★★★

ಶಾಲೆಯಲ್ಲಿ 'ಕ್ರಿಕೆಟ್ ಮ್ಯಾಚ್' ಮೇಲೆ ಒಂದು ಪ್ರಬಂಧ ಬರೆಯುವಂತೆ ವಿದ್ಯಾರ್ಥಿಗಳಿಗೆ ಆದೇಶಿಸಿದರು ಪ್ರಿನ್ಸಿಪಾಲ್. ಎಲ್ಲಾ ವಿದ್ಯಾರ್ಥಿಗಳು ಹರಸಾಹಸ ಪಟ್ಟು ಬರೆಯುತ್ತಿದ್ದರು. ಪುಂಡಲೀಕ ಒಂದೇ ವಾಕ್ಯ ಬರೆದು ಪ್ರಬಂಧ ಮುಗಿಸಿದ್ದ. ಅವನು ಬರೆದದ್ದು ಏನು ಗೊತ್ತಾ...?

ಮಳೆ ಕಾರಣ ಕ್ರಿಕೆಟ್ ಮ್ಯಾಚ್ ರದ್ದಾಗಿತ್ತು!

(ಸಂಗ್ರಹ) **ಜಿ. ವಿ. ಪ್ರಭು**

ಮೊಬೈಲ್ ಅಂಗಡಿಯಲ್ಲಿ ಉದ್ಯೋಗಿಯಾಗಿರುವ ಗೋಪಿಗೆ ಹೊಟ್ಟೆಯಲ್ಲಿ ತೊಂದರೆ ಕಾಣಿಸಿಕೊಂಡಿತು. ವೈದ್ಯರ ಬಳಿ ತೆರಳಿ ಆತ ಹೀಗೆ ನಿವೇದಿಸಿಕೊಂಡ.

'ಡಾಕ್ಟರ್ ಸಾಹೇಬರೇ... ಬೆಳಿಗ್ಗಿನಿಂದಲೇ ಅನಿಯಂತ್ರಿತ ಔಟ್ ಗೋಯಿಂಗ್ ನಡೀತಾ ಇದೆ. ಒಳಗಿನಿಂದ ಹೊಸ... ಹೊಸ... ರಿಂಗ್ ಟೋನ್ ಕೇಳಿಬರುತ್ತಾ ಇದೆ. ಹೊಟ್ಟೆಯಲ್ಲಿ ಬ್ಯಾಲೆನ್ಸ್ ಕೂಡಾ ಮುಗಿದು ಹೋಗಿದೆ. ಸಣ್ಣ ಸಣ್ಣ ರಿಚಾರ್ಜ್ ಮಾಡಿಸುತ್ತೇನಾದರೂ 5 ನಿಮಿಷಗಳೊಳಗೇ ಅದೂ ಖಾಲಿಯಾಗುತ್ತದೆ. ದಯವಿಟ್ಟು ಹೇಗಾದರೂ ಈ ಸ್ಕೀಮ್ ಬಂದ್ ಮಾಡಿ...!

★★★

ಸಂತಾ: ಹೊರಗೆ ಜನರು ನನ್ನನ್ನು ದೇವರೆಂದು ಪರಿಗಣಿಸುತ್ತಿದ್ದಾರೆ ಗೊತ್ತಾ...

ಪತ್ನಿ: ಅದು ಹೇಗೆ?

ಸಂತಾ: ಇಂದು ನಾನು ಮೃಗಾಲಯಕ್ಕೆ ಹೋದಾಗ, ಅಲ್ಲಿದ್ದ ಎಲ್ಲರೂ 'ಓ ದೇವರೇ... ನೀನು ಪುನಃ ಬಂದೆಯಾ?' ಎಂದು ಕೇಳುತ್ತಿದ್ದರು!

★★★

ಸಂತಾ ಮತ್ತು ಬಂತಾ ತಮ್ಮ ಪರಿವಾರ ಸಮೇತ ಒಟ್ಟು 19 ಸದಸ್ಯರು ಸಿನಿಮಾ ವೀಕ್ಷಿಸಲು ಹೋಗಿದ್ದರು. ಏಕೆ ಗೊತ್ತೆ?

ಏಕೆಂದರೆ... '18 ಕ್ಕಿಂತ ಕೆಳಗಿನವರಿಗೆ ಪ್ರವೇಶವಿಲ್ಲ' ಎಂದು ಅಲ್ಲಿ ನೋಟಿಸು ಹಾಕಲಾಗಿತ್ತು!

★★★

ಭಾವೀ ಪತ್ನಿಯೊಂದಿಗೆ ಪುಸ್ತಕ ಮಳಿಗೆಗೆ ತೆರಳಿ 'ನಿಮ್ಮಲ್ಲಿ ಪತಿಯೇ ಮನೆಯ ಯಜಮಾನ' ಎನ್ನುವ ಪುಸ್ತಕವಿದೆಯೆ? ಎಂದು ವಿಚಾರಿಸಿದನು.

ಸೇಲ್ಸ್ ಗರ್ಲ್ ವ್ಯಂಗ್ಯವಾಗಿ ನಗುತ್ತಾ: 'ಕಾಮಿಕ್ ಮತ್ತು ಕಥೆ ಪುಸ್ತಕಗಳು ಮೊದಲನೆ ಮಹಡಿಯಲ್ಲಿವೆ...!' ಎಂದಳು

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

## ಸರಿ ಹೋಗ್ತೀರಾ

ಮುಖ್ಯಮಂತ್ರಿಗಳು ಹುಚ್ಚಾಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಎದುರಿಗೆ ಬಂದ ಹುಚ್ಚನಿಗೆ ಹಸ್ತಲಾಘವ ನೀಡಿ ಹೇಳಿದರು.

'ನಾನು ರಾಜ್ಯದ ಮುಖ್ಯಮಂತ್ರಿ'

ಅವನು ಮೇಲಿಂದ ಕೆಳಗಿನವರೆಗೂ ಇವರನ್ನು ನೋಡಿ ನುಡಿದ.

'ಹೊಸದಾಗಿ ಬಂದಾಗ ಇಲ್ಲಿ ಎಲ್ರೂ ಹಾಗೇ ಹೇಳೋದು. ಸ್ವಲ್ಪ ದಿನ ಆದ ಮೇಲೆ ಸರಿ ಹೋಗ್ತೀರಾ ಬಿಡಿ...'



★★★

## ವಯಸ್ಸು

ಗಣಿತ ಮಾಸ್ತರು:1957ನೇ ಇಸವಿಯಲ್ಲಿ ಹುಟ್ಟಿದವರಿಗೆ ಈಗ ಎಷ್ಟು ವಯಸ್ಸಾಗಿರುತ್ತದೆ?

ತಿಮ್ಮ: ಗಂಡಸರಿಗಾದರೆ 59. ಹೆಂಗಸರಿಗಾದರೆ 29 ಸಾರ್!

(ಸಂಗ್ರಹ) **ಕೆ. ಶ್ರೀನಿವಾಸರಾವ್, ಹರಪನಹಳ್ಳಿ**


ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265

ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ, ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೆದನ ಮುಂತಾದ

ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.

ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.

ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.

ಆಫೀಸ: ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.

ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.

0836-2282265
E-mail: mbjoshiastro@gmail.com